ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್‌ಎಸ್‌ಎಸ್ — ೧೯

ಸಂಪುಟ ೧ ಸಂಚಿಕೆ ೧೦ ಕೊಪ್ಪ ೨೪–೧೦–೮೨ ಭಾನುವಾರ ಬೆಲೆ ೪೦ ಪೈಸೆ

ನಲ್ಲಿ ನೀರಿನಲ್ಲಿ ಕೆಸರು, ಹಾಸಂಬು, ಹುಳ, ಕಪ್ಪೆಮರಿ ಇತ್ಯಾದಿ....

ಬೆಣೆ ಕೀಳಲಿಲ್ಲ — ಸ್ವಚ್ಛ ನೀರು ಹರಿಯಲಿಲ್ಲ

ಕೊಪ್ಪ: ನೀರು ಸರಬರಾಜಿನ ಸುಧಾರಣೆ ಹಾಗೂ ಶುದ್ಧ ನೀರಿನ ಪೂರೈಕೆಗಾಗಿ ಇಲ್ಲಿನ ಪುರಸಭೆ ತೆಗೆದುಕೊಂಡ ಕ್ರಮ "ಎಲ್ಲಿತ್ತೋ ಅಲ್ಲೇ ಇದೆ" ಎಂದು ಗೊತ್ತಾಗಿದೆ.

ಬೆಳೆಯುತ್ತಿರುವ ಪಟ್ಟಣದ ಅಗತ್ಯವನ್ನು ಗಮನಿಸಿ, ಈಗಿರುವ ೫೦ ಸಾವಿರ ಗ್ಯಾಲನ್ ಸಾಮರ್ಥ್ಯದ ಟ್ಯಾಂಕಿನ ಜೊತೆಗೆ ೧ ಲಕ್ಷ ಗ್ಯಾಲನ್ನಿನ ಇನ್ನೊಂದು ಟ್ಯಾಂಕು ಹಾಗೂ ಎರಡಕ್ಕೂ ಒಟ್ಟಿಗೆ ಒಂದು ಸೋಸುವ ತೊಟ್ಟಿ–ಇವುಗಳ ನಿರ್ಮಾಣಕ್ಕಾಗಿ ಅಂದಾಜು ಯೋಜನೆ (ಎಸ್ಟಿಮೇಟ್) ತಯಾರಿಸಿಕೊಡುವಂತೆ ಪುರಸಭೆ ಚಿಕ್ಕಮಗಳೂರಲ್ಲಿರುವ ನಗರ ನೀರು ಸರಬರಾಜು ಎಕ್ಸಿಕ್ಯುಟಿವ್ ಇಂಜಿನಿಯರ್‌ರನ್ನು ಕೇಳಿ ಒಂದು ವರ್ಷ ಆಗುತ್ತಬಂತು. ಯೋಜನೆ ಸಿದ್ಧವಾದ ಮೇಲೆ ಅದರ ವೆಚ್ಚ ಪುರಸಭೆಯ ಸಾಮರ್ಥ್ಯಕ್ಕೆ ಮೀರಿದ್ದಾದರೆ ಸರ್ಕಾರದ ಮಂಜೂರಾತಿಗೆ ಬೇರೆ ಕಳಿಸಿ ಕಾದು ಕೂರಬೇಕಾಗುತ್ತದೆ. ಆದರೆ ಇನ್ನೂ ಯೋಜನೆಯೇ ಸಿದ್ಧವಾಗಿಲ್ಲ.

ಊರಿನ, ತಾಲೂಕಿನ ಮುಖಂಡರು ಸದರಿ ಕಚೇರಿಯಲ್ಲಿ ಸಿಕ್ಕಿಕೊಂಡಿರುವ ಈ ಯೋಜನೆಯ ಬೆಣೆಯನ್ನು ಕಿತ್ತು ಊರಿಗೆ ಯಥೇಚ್ಛ ಶುದ್ಧ ನೀರು ಹರಿಸಲೆಂದು ೮ ತಿಂಗಳ ಹಿಂದೆಯೇ 'ದೀವಟಿಗೆ' (೨೧-೨-೮೨) ಆಶಿಸಿತ್ತು. ಆದರೆ ಯಾರಿಗೂ ಈ ಗೊಡವೆ ಇದ್ದಂತಿಲ್ಲ.

ಹಾಸಂಬು–ಕಪ್ಪೆಮರಿ–ಹುಳ, ಇತ್ಯಾದಿ

ಮೊನ್ನೆ ನಾಗರಿಕರೊಬ್ಬರು ನಲ್ಲಿಯಲ್ಲಿ ಕೆಸರಿನ ಜೊತೆ ಬಂದ ಸುಮಾರು ಮೂರಂಗುಲ ಉದ್ದದ ಮಣ್ಣುಹುಳ ವೊಂದನ್ನು ಪತ್ರಕರ್ತರಿಗೆಲ್ಲ ತೋರಿಸಲು ಬಾಟಲಿಯಲ್ಲಿ ತಂದಿದ್ದರು. ಹೀಗೆ ಹುಳುಗಳು, ಕೆಸರು, ಹಾಸಂಬು, ಕಪ್ಪೆಮರಿ (ಗೊದಮೊಟ್ಟೆ) ಇವೆಲ್ಲ ನಲ್ಲಿಯಲ್ಲಿ ಬರುವುದು ಸಾಮಾನ್ಯವಾಗಿದೆ. ಇದರ ಮೇಲೆ, ಇನ್ನು ಬೇಸಿಗೆ ಬಂತೆಂದರೆ ನೀರೇ ಬರುವುದು ಕಷ್ಟ. ಎಷ್ಟು ದಿನ ಅಂತ ಹೊಂದಿಕೊಂಡು ಹೋಗಬೇಕು ಎಂಬುದು ನಾಗರಿಕರ ಪ್ರಶ್ನೆ. [ಒಬ್ಬ ಪೋಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ರೇ ಪತ್ರಿಕೆಯವರೊಡನೆ ದೂರಿಕೊಳ್ಳುವಷ್ಟು ಸಮಸ್ಯೆ!]

ಹೊಳೆಗೆ ಸುರಿದ ಹಣ

"ಹರಿಹರಪುರ ಹೊಳೆಯಿಂದ ಕೊಪ್ಪಕ್ಕೆ ನೀರು ಹತ್ತಿಸುವ ೨೭ ಲಕ್ಷ ರೂ. ಗಳ ಯೋಜನೆ ಯಾರ್‍ಯಾರನ್ನೋ ದೊಡ್ಡವರನ್ನು ಮಾಡಿತು. ಅದರ ಬದಲು ಕೇವಲ ನಾಲ್ಕೈದು ಲಕ್ಷ ರೂ.ಗಳನ್ನು ಹಿರೀಕೆರೆಗೇ ಹಾಕಿದ್ದರೆ ಸಮೃದ್ಧಿಯಾಗಿ ಊರಿಗೆಲ್ಲ ನೀರು ಸಿಗುತ್ತಿತ್ತು. ಹೊಳೆಗೆ ಸುರಿದ ಹಣ ಹರಿದೇ ಹೋಯಿತು" ಎನ್ನುತ್ತಾರೆ ತಿಳಿದ ಜನ.

ಊರಿನ ಸಮಸ್ಯೆಯ ಚಿಂತೆ ಹೊತ್ತವರು ಯಾರಾದರೂ ಇದ್ದರೆ....

ಮೋಸದಿಂದ ನುಂಗಿದ್ದನ್ನು ಹಿಂದಕ್ಕೆ ವಸೂಲಿಸುವ ಕ್ರಮವಂತೂ ಈ ದೇಶದಲ್ಲಿ ಚಾಲ್ತಿಯಲ್ಲಿಲ್ಲ. ಆದರೂ, ಊರಿನ ಹಿತದ ಬಗ್ಗೆ ಸ್ವಲ್ಪವಾದರೂ ಆಲೋಚನೆಯಿರುವ ಮುಖಂಡರು ಯಾರಾದರೂ **ಇದ್ದರೆ ಈಗಲೂ ಕಾಲ ಮಿಂಚಿಲ್ಲ. ಪುರಸಭೆ ಮಾಡಿರುವ ಒಳ್ಳೆಯ ಆಲೋಚನೆಯನ್ನು ಕೂಡಲೇ ಕಾರ್ಯಗತಗೊಳಿಸಬೇಕು, ಅಷ್ಟೆ. ಯಾವಯಾವುದಕ್ಕೋ ಮಂತ್ರಿ - ಮುಖ್ಯಮಂತ್ರಿಗಳವರೆಗೆ ಪ್ರಭಾವ ನಡೆಸುವ ಮಂದಿಗೆ ಊರ ಬಗ್ಗೆಯೂ ಚಿಂತೆ ಇದ್ದರೆ ಇದೇನೂ ಕಷ್ಟವಲ್ಲ ಎಂಬುದು ಊರಿನವರ ಅಭಿಪ್ರಾಯ.**

ನಿಧನ

ಕೊಪ್ಪ: ಇಲ್ಲಿನ ಶಂಕರ್ ಕಂಪೆನಿಯಲ್ಲಿ ಮ್ಯಾನೇಜರ್ ಆಗಿದ್ದ ಹರಂದೂರಿನ ಗಂಗಾಧರ ರಾಯರು ಅ.೨೧ ರಂದು ನಿಧನರಾದರು. ಬೆಳಿಗ್ಗೆ ಕಚೇರಿಯಲ್ಲಿ ಕೆಲಸ ಮುಗಿಸಿಕೊಂಡು ಮನೆಗೆ ಹೋದವರು, ಕೆಲಸದವನ ಜೊತೆ ಸ್ವಲ್ಪ ಹೊತ್ತು ಕೆಲಸಮಾಡಿದ್ದರು; ಅನಂತರ ಸ್ವಲ್ಪ ಎದೆನೋವು ಕಾಣಿಸಿ, ಒಂದೆರಡು ಬಾರಿ ವಾಂತಿಯಾಗಿ, ಶೌಚಗೃಹದಲ್ಲಿ ಎಚ್ಚರತಪ್ಪಿ ಬಿದ್ದವರು ಚೇತರಿಸಲಿಲ್ಲ. ತೀವ್ರ ಹೃದಯಾಘಾತವೇ ಮರಣಕ್ಕೆ ಕಾರಣವೆನ್ನಲಾಗಿದೆ.

ದಿ॥ ದೇವೇಗೌಡರ ಕಾಲದಿಂದಲೂ ಕಂಪನಿಯಲ್ಲಿ ದುಡಿದ ಅವರು ಕಂಪನಿಯ ಏಳಿಗೆಯ ಎಲ್ಲ ಹಂತಗಳನ್ನೂ ಕಂಡವರಾಗಿದ್ದರು. ಅಪಾರ ಸಂಖ್ಯೆಯ ನೌಕರರು, ಅಭಿಮಾನಿಗಳು ಮೃತರ ಅಂತಿಮ ದರ್ಶನ ಪಡೆದರು.

ಕಚೇರಿ ಸ್ಥಳಾಂತರ

ಕೊಪ್ಪ: ಇಲ್ಲಿನ ಮೇಲಿನ ಪೇಟೆಯಲ್ಲಿದ್ದ ಎಲೆಕ್ಟ್ರಿಕ್ ಮಂಡಳಿಯ ಕ್ಷೇತ್ರಾಧಿಕಾರಿಗಳ ಕಚೇರಿಯನ್ನು ಬಾಳಗಡಿ ರಸ್ತೆಯಲ್ಲಿ ಹೊಸ ಆಸ್ಪತ್ರೆ ಕಟ್ಟಡದ ಪಕ್ಕದ ಕಟ್ಟಡಕ್ಕೆ ೧೫-೧೦-೮೨ ರಿಂದ ಸ್ಥಳಾಂತರಿಸಲಾಗಿದ್ದು, ಸಾರ್ವಜನಿಕರು ಈ ಮೇಲಿನ ಬದಲಾವಣೆಯನ್ನು ಗಮನಿಸಬೇಕಾಗಿ ಕ್ಷೇತ್ರಾಧಿಕಾರಿ ಬಿ. ಎಂ. ಜಯರಾಂ ಕೋರಿದ್ದಾರೆ.

ಕೊಪ್ಪ ಲೋಕೋಪಯೋಗಿ ಉಪವಿಭಾಗದಲ್ಲಿ

ಹಾಲಿ ನಡೆಯುತ್ತಿರುವ ಮತ್ತು ಮಂಜೂರಾಗಿರುವ ಕಾಮಗಾರಿಗಳು

ಕೊಪ್ಪ: ಲೋಕೋಪಯೋಗಿ ಇಲಾಖೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಕೆ.ವಿ.ವೆಂಕಟಯ್ಯ ಈಚೆಗೆ 'ಮುಂಜಾವು'ಗೆ ಕೊಟ್ಟ ಸಂದರ್ಶನದಲ್ಲಿ ತಮ್ಮ ಉಪವಿಭಾಗದಲ್ಲಿ ಹಾಲಿ ನಡೆಯುತ್ತಿರುವ ಮತ್ತು ಹೊಸದಾಗಿ ಮಂಜೂರಾಗಿರುವ ಕಾಮಗಾರಿಗಳ ವಿವರ ನೀಡಿದ್ದಾರೆ.

ಕಟ್ಟಡಗಳು

೧. ಕೊಪ್ಪದಲ್ಲಿ ಅರಣ್ಯ ಇಲಾಖೆಯ ಸ್ವಂತ ನಿವೇಶನದಲ್ಲಿ (ತೀರ್ಥಹಳ್ಳಿ ರಸ್ತೆ) ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಚೇರಿಯ ಕಟ್ಟಡಕ್ಕಾಗಿ ೫.೪ ಲಕ್ಷ ರೂ. ಮಂಜೂರಾಗಿದ್ದು, ತಳಪಾಯದ ಕೆಲಸ ಶುರುವಾಗಿದೆ.

೨. ನ.ರಾ.ಪುರದಲ್ಲಿ ೧೩ ಪೋಲೀಸ್ ವಸತಿಗೃಹಗಳ (ಸ.ಇ.-೧. ಹೆಡ್ ಕಾನ್‌ಸ್ಟೇಬಲ್-೫, ಕಾನ್‌ಸ್ಟೇಬಲ್–೭) ನಿರ್ಮಾಣಕ್ಕೆ ೪ ಲಕ್ಷ ರೂ. ಮಂಜೂರಾಗಿದ್ದು ೮.೩ ಟೆಂಡರಿನ ದಿನವಾಗಿದೆ.

೩. ಕೊಪ್ಪದಲ್ಲಿ ೫ ಲಕ್ಷ ೭೪ ಸಾವಿರ ರೂ.ವೆಚ್ಚದಲ್ಲಿ ಕಟ್ಟಲಾಗುತ್ತಿರುವ ೩೦ ಹಾಸಿಗೆಗಳ ಸಾರ್ವಜನಿಕ ಆಸ್ಪತ್ರೆಯ ಕೆಲಸ ಮುಗಿಯುತ್ತ ಬಂದಿದ್ದು ೫ ಲಕ್ಷ ರೂ. ಈಗಾಗಲೇ ಖರ್ಚಾಗಿದೆ. ನೀರು ಪೂರೈಕೆಯ ಸಲಕರಣೆಗಳು ಬಂದಿವೆ. ಅದರ ಬಗ್ಗೆ ೭೨ ಸಾವಿರ ರೂ. ನ ಉಪ-ಅಂದಾಜು ಸೂಪರಿಂಟೆಂಡಿಂಗ್ ಇಂಜಿನಿಯರ್‌ರಿಂದ ಒಪ್ಪಿಗೆಯಾಗಿಬಂದಿದೆ. ೭೨ ಸಾವಿರ ರೂ. ವೆಚ್ಚದಲ್ಲಿ ವಿದ್ಯುದೀಕರಣ ನಡೆಯಲಿದ್ದು, ವಿದ್ಯುಚ್ಛಕ್ತಿ ಮಂಜೂರಾತಿಗಾಗಿ ಆ ಇಲಾಖೆಯ ಇನ್‌ಸ್ಪೆಕ್ಟೊರೇಟ್‌ಗೆ ಕೇಳಲಾಗಿದೆ.

೪. ನ.ರಾ.ಪುರದಲ್ಲಿ ೭.೫ ಲಕ್ಷ ರೂ. ವೆಚ್ಚದ ನ್ಯಾಯಾಲಯ ಕಟ್ಟಡಕ್ಕೆ ತಳಪಾಯ ಕ್ಕ ... ಇಂಜಿನಿಯರಿಂಗ್ ವರ್ಕ್ಸ್‌ನವರಿಂದ ಟೆಂಡರ್ ಬಂದಿದ್ದು, ಮುಖ್ಯ ಇಂಜಿನಿಯರರ ಒಪ್ಪಿಗೆ ಮತ್ತು ಕೆಲಸದ ಆದೇಶ ಹೊರಿಸುವುದಕ್ಕಾಗಿ ಕಳಿಸಲಾಗಿದೆ.

೫. ತಾ॥ ಮಟ್ಟದ ಸರ್ಕಾರಿ ಕಚೇರಿಗಳ ವಿನ್ಯಾಸವಾದ "ಮಿನಿ ವಿಧಾನ ಸೌಧ" ವನ್ನು ಕಟ್ಟಲಿರುವ ಶೃಂಗೇರಿಯ ತಾಲೂಕಚೇರಿ ಕಟ್ಟಡಕ್ಕಾಗಿ ೧೫ ಲಕ್ಷ ರೂ. ಯೋಜನೆ ಮಂಜೂರಾತಿಗೆ ಹೋಗಿದೆ. ಗೋಚಿಗುಡ್ಡದ ಮೇಲೆ ೫ ಎಕರೆ ಜಾಗ ಮಂಜೂರಾಗಿದೆ.

(೩ನೇ ಪುಟಕ್ಕೆ)

ಬಡವರ ಬಾಳಲು ಬಿಡದವರು

ತೀರ್ಥಹಳ್ಳಿ: ಈ ತಾಲೂಕಿನ ಗುಡ್ಡೆಕೊಪ್ಪ ಪಂಚಾಯ್ತಿಗೆ ಸೇರಿದ ಹಿರೇಸರದಲ್ಲಿ ಹರಿಜನ ಕುಟುಂಬವೊಂದು ಸ್ವಂತ ಕಾಲ ಮೇಲೆ ನಿಲ್ಲುವ ಪ್ರಯತ್ನವನ್ನು ಶ್ರೀಮಂತರು ಧ್ವಂಸಮಾಡುತ್ತಿರುವ ಬಗ್ಗೆ ಪತ್ರಿಕೆಗೆ ದೂರು ಬಂದಿದೆ.

೮ ಮಕ್ಕಳ ತಂದೆಯಾದ ಮುದ್ದ ಎಂಬ ಹರಿಜನ ವ್ಯಕ್ತಿಗೆ ಬಹಳ ಶ್ರಮದಿಂದ ಕೋಟಿಕೊಪ್ಪ ದರಲಗೋಡಿನ ಬಲ ಭಾಗಕ್ಕೆ ೩೦ ಗುಂಟೆ ಜಾಗ ಮಂಜೂರಾಗಿದ್ದು ಕಳೆದ ಎರಡು ವರ್ಷಗಳಿಂದ ಪಕ್ಕದ ಸರ್ಕಾರಿ ಜಾಗದಲ್ಲಿ ೨ ಎಕ್ರೆಗೆ ಇವರು ದರ್ಖಾಸ್ತು ಕೊಟ್ಟು ಅರ್ಧ ಎಕರೆ ಸಾಗುವಳಿ ಮಾಡಿದ್ದರೆ, ಸರ್ಕಾರಿ ಜಾಗದ ಆಚೆಗೆ ಜಮೀನು ಹೊಂದಿರುವ "ಬಲಿಷ್ಠ, ದುಷ್ಟ ಜಮೀನ್ದಾರ" ಚಂದ್ರಶೇಖರ ಮಯ್ಯ ಎಂಬವರು ಅದನ್ನು ಕಿತ್ತು, ಬೇಲಿಹಾಕಿ, ನಿತ್ಯ ಪೋಲೀಸ್ ಸ್ಟೇಶನ್ನಿಗೆ ಅಲೆಯುತ್ತಿದ್ದಾರೆಂದು ದೂರಲಾಗಿದೆ.

(೪ನೇ ಪುಟಕ್ಕೆ)

'ಮುಂಜಾವು'ಗೆ ಚಂದಾದಾರರಾಗಿರಿ

ಮಾನವ ಹಕ್ಕುಗಳನ್ನು ಉಳಿಸಿ

—ಇರಾನಿನ ಮಾನವ ಹಕ್ಕುಗಳ ವೇದಿಕೆ, ಬೆಂಗಳೂರು

ಇರಾನಿನ ಮಾನವ ಹಕ್ಕುಗಳ ವೇದಿಕೆ, ಬೆಂಗಳೂರು ಇವರು ಮತಾಂಧ ಖೊಮೇನಿ ಆಡಳಿತದ ವಿರುದ್ಧ ಸೆ. ೨೯ ರ ಸಂಜೆ ಪ್ರತಿಭಟನಾ ಮೆರವಣಿಗೆ ತೆಗೆದರು. ೩೦೦ ಪ್ರತಿಭಟನಕಾರರ ಈ ಮೆರವಣಿಗೆ ಮೈಸೂರು ಬ್ಯಾಂಕು ಚೌಕದಿಂದ ಹೊರಟು ರಾಜಭವನ ತಲುಪಿ ರಾಜ್ಯಪಾಲರಿಗೆ ಮನವಿ ಸಲ್ಲಿಸಬೇಕಿತ್ತು. ಆದರೆ ಕೆ. ಆರ್. ವೃತ್ತಕ್ಕೆ ಬರುವಷ್ಟರಲ್ಲಿ ಸೆಂಟ್ರಲ್ ಕಾಲೇಜ್ ಆವರಣದಲ್ಲಿ ಅಡಗಿದ್ದ ಸಶಸ್ತ್ರ ಗೂಂಡಾಪಡೆ ಪ್ರದರ್ಶನಕಾರರ ಮೇಲೆ ಏಕಾಏಕಿ ಎರಗಿತು. ಈ ಆಕ್ರಮಣಕಾರರಲ್ಲಿ ಖೊಮೇನಿ ಪರ ಇರುವ "ಭಾರತದಲ್ಲಿನ ಇಸ್ಲಾಮಿ ವಿದ್ಯಾರ್ಥಿಗಳ ಸಂಘಟನೆ"ಯ ಕಾರ್ಯಕರ್ತರು ಹಾಗೂ ಹುಬ್ಬಳ್ಳಿ, ಮೈಸೂರು, ಮದ್ರಾಸುಗಳಿಂದ ಬಂದ ಇಸ್ಲಾಮಿ ಮತಾಂಧರು ಇದ್ದರು. ರಸ್ತೆಯ ಎರಡೂ ಬದಿಗಳಿಂದ ಪೂರ್ವಯೋಜಿತ ಶೈಲಿಯಲ್ಲಿ ಎರಗಿದ ಈ ಗೂಂಡಾಗಳು ಚೂರಿ, ಸರಳು, ಸೈಕಲ್ಲು ಚೈನು, ಸೋಡಾ ಬಾಟಲಿ, ಕಲ್ಲು ಇತ್ಯಾದಿ ಮಾರಕಾಸ್ತ್ರಗಳೊಡನೆ ಶಾಂತಿಯುತ ಮೆರವಣಿಗೆ ಹೊರಟಿದ್ದ ನಿಃಶಸ್ತ್ರ ಪ್ರದರ್ಶನಕಾರರ ಮೇಲೆ ಹಲ್ಲೆ ನಡೆಸಿದರು. ಸರ್ಕಾರಿ ವಿಜ್ಞಾನ ಕಾಲೇಜಿನ ವಿದ್ಯಾರ್ಥಿ ಅಬ್ದುಲ್ ಅಮೀರ್ ರಾಹದರ್ (೨೭) ಆರು ಇಂಚಿನ ಆಳದ ತಿವಿತಕ್ಕೊಳಗಾಗಿ ರಕ್ತಕಾರಿ ಮಾರ್ಥಾ ಆಸ್ಪತ್ರೆಯಲ್ಲಿ ಮೃತಪಟ್ಟರು. (ಅನಾಥೆಯಾದ ಇವರ ಹೆಂಡತಿಗೆ ಇನ್ನೂ ಚಿಕ್ಕ ವಯಸ್ಸು.) ಇನ್ನೂ ಗಂಭೀರ ಸ್ಥಿತಿಯಲ್ಲಿ ನರಳುತ್ತಿರುವವರಲ್ಲಿ ಹೆಂಗಸರೂ ಇದ್ದಾರೆ. ಪೋಲೀಸರು ಸಕಾಲದಲ್ಲಿ ಮಧ್ಯ ಪ್ರವೇಶಿಸಿ ಪರಿಸ್ಥಿತಿ ಹತೋಟಿಗೆ ತಂದರು. ಧೈರ್ಯಗೆಡದ ಪ್ರದರ್ಶನಕಾರರ ಒಂದು ಸಣ್ಣ ಗುಂಪು ಪೋಲೀಸ್ ರಕ್ಷಣೆಯಲ್ಲಿ ರಾಜ್ಯಪಾಲರಿಗೆ ಮನವಿ ಸಲ್ಲಿಸಿತು.

ಇದೇ ವರ್ಷದ ಜೂನ್‌ನಲ್ಲಿ ಅಲಿಘರ್‌ನಲ್ಲಿ ನಿಗೂಢವಾಗಿ ಕೊಲೆಯಾದ ಖೊಮೇನಿ ವಿರೋಧಿ ವಿದ್ಯಾರ್ಥಿಯ ದುರಂತದ ಪ್ರತಿಧ್ವನಿ ಈಗ ಬೆಂಗಳೂರಲ್ಲಿ. ವಿದೇಶವೊಂದರಲ್ಲಿ ಒಂದು ಇಂಥ ಹದ್ದುಮೀರಿದ ಬರ್ಬರತೆ ನಡೆಸುತ್ತಿರುವ ಖೊಮೇನಿ-ಪರಗುಂಪು ತನ್ನದೇ ದೇಶದಲ್ಲಿ ಇನ್ನೆಂಥ ಭಯೋತ್ಪಾದನೆ ಉಂಟುಮಾಡಿರಬಹುದೆಂಬುದು ಊಹೆಗೂ ನಿಲುಕದ ಸಂಗತಿ.

ಇರಾನಿ ರಾಯಭಾರ ಕಛೇರಿ ಹಾಗೂ ಇಸ್ಲಾಮಿ ಸಂಘಟನೆಗಳು ಕೊಚ್ಚಿಕೊಳ್ಳುವ 'ಶಾಂತಿಪ್ರಿಯತೆ' ಎಂಥ ಬಂಡಲ್ ಬಾಜ್ ಎಂಬುದು ಇದರಿಂದ ತಿಳಿಯುತ್ತದೆ.

ಕೊಲೆಗಡುಕರಿಗೆ ಕೂಡಲೇ ಭಾರತೀಯ ಶಿಕ್ಷಾ ಸಂಹಿತೆ ಅನ್ವಯ ಶಿಕ್ಷೆ ನೀಡಬೇಕು. ನಮ್ಮ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಕೂಡಲೆ ಮತಾಂಧ ಖೊಮೇನಿ-ಪರ ವಿದ್ಯಾರ್ಥಿಗಳನ್ನು ದೇಶಬಿಟ್ಟು ಓಡಿಸಬೇಕು. ಅವರ ಸಂಘಟನೆಗಳನ್ನು ರದ್ದುಗೊಳಿಸಬೇಕು. ಹಾಗೂ ಖೊಮೇನಿ ವಿರೋಧಿ ವಿದ್ಯಾರ್ಥಿಗಳಿಗೆ ಭಾರತಾದ್ಯಂತ ಸೂಕ್ತ ರಕ್ಷಣೆ ನೀಡಬೇಕು ಎಂಬುದಾಗಿ ಇರಾನಿನ ಮಾನವ ಹಕ್ಕುಗಳ ವೇದಿಕೆ ಒತ್ತಾಯಿಸಿದೆ.

'ನ್ಯಾಯ'

ನ್ಯಾಯಾಲಯದಲ್ಲಿ ಕೆಲಸದಲ್ಲಿರುವ ಸ್ನೇಹಿತರೊಬ್ಬರು ಒಂದು ಸ್ವಾರಸ್ಯದ ಪ್ರಕರಣ ಹೇಳಿದರು:

ವಾದಿ ನ್ಯಾಯಧೀಶರಲ್ಲಿ ಮನವಿ ಮಾಡಿದ: "ಸ್ವಾಮಿ ಪ್ರತಿವಾದಿಯೊಂದಿಗೆ ನನ್ನ ಮಗಳ ಲಗ್ನ ನಿಶ್ಚಿತವಾಗಿತ್ತು. ಈ ಸಂಬಂಧದ ನಿಶ್ಚಿತಾರ್ಥ ಶಾಸ್ತ್ರವೂ ಆಗಿ, ಮದುವೆ ಪತ್ರಿಕೆಯನ್ನು ಮುದ್ರಿಸಲಾಗಿತ್ತು. ಆದರೆ ಈಗ ಪ್ರತಿವಾದಿಯು ಮದುವೆ ಮಾಡಿಕೊಳ್ಳಲು ನಿರಾಕರಿಸುತ್ತಿದ್ದಾನೆ. ಮಾನ್ಯ ನ್ಯಾಯಧೀಶರು ಪ್ರತಿವಾದಿಗೆ ನನ್ನ ಮಗಳನ್ನು ಮದುವೆಯಾಗುವಂತೆ ಆದೇಶಿಸಿ ನ್ಯಾಯ ಕೊಡಿಸಬೇಕು."

ನ್ಯಾಯಧೀಶರ ಎದುರಿಗೆ ಪ್ರತಿವಾದಿ ಹಾಜರಾದಾಗ ಈ ವಿಷಯ ಸಂಪೂರ್ಣ ನಿಜವೆಂದು ತಿಳಿದು ಬಂತು. ಆದರೆ ಒಬ್ಬ ಗಂಡಸಿಗೆ 'ನೀನು ಇಂಥದೇ ಹುಡುಗಿಯನ್ನು ಮದುವೆಯಾಗತಕ್ಕದ್ದು' ಎಂದು ನ್ಯಾಯಾಧೀಶರು ತಾನೇ ಹೇಗೆ ವಿಧಿಸಿಯಾರು? ಯೋಚನೆ ಮಾಡಿ ಅವರೊಂದು ತಾತ್ಕಾಲಿಕ ತೀರ್ಪು ನೀಡಿದರು. ಅದು ಹೀಗಿತ್ತು:

"ವಾದಿಯ ಹೇಳಿಕೆ ಸಂಪೂರ್ಣ ಸತ್ಯವಾಗಿದೆ. ನ್ಯಾಯಾಲಯವು ಮತ್ತೆ ಅಪ್ಪಣೆ ಮಾಡುವವರೆಗೂ, ಪ್ರತಿವಾದಿಯು ಈ ಹುಡುಗಿಯ ಹೊರತು ಬೇರೆ ಹುಡುಗಿಯನ್ನು ಮದುವೆಯಾಗಕೂಡದು"

-'ನಕ್ಷತ್ರಿಕ'

ಸರ್ಕಾರಿ ನೌಕರರು ಲಂಚ ಕಕ್ಕಿದ ಪ್ರಸಂಗ

ರೈತ ಸಂಘದ ಕಾರ್ಯಕರ್ತರು ಅಧಿಕಾರಿಗಳ ಮತ್ತು ರೈತರ ಎದುರು ಸ್ಥಳದಲ್ಲೇ ಏರ್ಪಡಿಸಿದ 'ಜನತಾ ನ್ಯಾಯಾಲಯ'ದೆದುರು ಕಂದಾಯ ಇಲಾಖೆ ನೌಕರರು ಲಂಚ ಪಡೆದ ಅಪರಾಧವನ್ನು ಒಪ್ಪಿ, ಅದನ್ನು ಹಿಂದಕ್ಕೆ ಕೊಡುವುದಾಗಿ ಒಪ್ಪಿಕೊಂಡ ಎರಡು ಅಪೂರ್ವ ಪ್ರಸಂಗಗಳು ಈಚೆಗೆ ಸಕಲೇಶಪುರ ತಾ|| ನಲ್ಲಿ ನಡೆದಿರುವುದು ವರದಿಯಾಗಿದೆ.

ಹೆತ್ತೂರು ಹೋಬಳಿ ಹೊಂಗಡ ಹಳ್ಳದ ನಾಲ್ವರು ರೈತರಿಂದ ಖಾತೆ ಬದಲಾವಣೆಗಾಗಿ ರೆವಿನ್ಯೂ ಇನ್ಸ್‌ಪೆಕ್ಟರ್ ಮರುಳಪ್ಪ ಮತ್ತು ಗ್ರಾಮಲೆಕ್ಕಿಗ ಚಂದ್ರಮೌಳಿ ಎಂಬವರು ೨,೫೧೫ ರೂ. ಲಂಚ ಪಡೆದ ವಿಚಾರ ಸಾಬೀತಾಗಿ, ಅದನ್ನು ಹಿಂದಿರುಗಿಸಲು ಒಪ್ಪಿಕೊಂಡರೆಂದೂ, ತಹಸೀಲ್ದಾರರು ಅವರಿಗೆ ಜಾಮೀನಾಗಿ ನಿಂತರೆಂದೂ ಹೇಳಲಾಗಿದೆ.

ವಳಲಹಳ್ಳಿಯ ಗ್ರಾಮಲೆಕ್ಕಿಗ ಬಸವರಾಜು ೧,೬೦೦ ರೂ. ಲಂಚ ಪಡೆದಿರುವುದನ್ನು ಇದೇರೀತಿ ಒಪ್ಪಿಕೊಂಡರೆಂದು ಗೊತ್ತಾಗಿದೆ.

ಸಕಲೇಶಪುರಕ್ಕೆ ಭೇಟಿ ನೀಡಿದ್ದ ಜಿಲ್ಲಾಧಿಕಾರಿ ಅಭಿಜಿತ್ ದಾಸ್‌ಗುಪ್ತರ ಗಮನಕ್ಕೆ ರೈತ ಕಾರ್ಯಕರ್ತರು ಈ ಪ್ರಕರಣಗಳನ್ನು ತಂದಾಗ, ಅವರು ಈ ಬಗ್ಗೆ ಕೂಡಲೇ ತನಿಖೆ ಮಾಡಿ, ಆರೋಪ ಸಾಬೀತಾದ

(೪ನೇ ಪುಟಕ್ಕೆ)

ದೇವಸ್ಥಾನದ ಆರತಿ ತಟ್ಟೆ ದುಡ್ಡಿನ ಮೇಲೆ ಮಂತ್ರಿಯ ಕಣ್ಣು

ದೇವಸ್ಥಾನಗಳಲ್ಲಿ ಅರ್ಚಕರು ಮಂಗಳಾರತಿ ಮಾಡಿ ಭಕ್ತಾದಿಗಳ ಮುಂದೆ ಹಿಡಿದಾಗ ತಟ್ಟೆಯಲ್ಲಿ ಸಂಗ್ರಹವಾಗುವ ಹಣವನ್ನು ಸರ್ಕಾರಕ್ಕೆ ಜಮಾ ಮಾಡಬೇಕೆಂದು ರಾಜ್ಯದ ಸಮಾಜ ಕಲ್ಯಾಣ ಮಂತ್ರಿ ಪಿ. ವೆಂಕಟರಮಣ ಸಲಹೆ ಮಾಡಿರುವುದಾಗಿ ವರದಿಯಾಗಿದೆ.

ಈಚೆಗೆ ಅವರು ನಂಜನಗೂಡಿನ ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಯ ಹೊಸ ಕಟ್ಟಡದ ಶಂಕುಸ್ಥಾಪನೆ ಸಮಾರಂಭದ ಅಧ್ಯಕ್ಷ ಸ್ಥಾನದಿಂದ ಮಾತಾಡುತ್ತ ಈ ರೀತಿ ಹೇಳಿದರು.

ಕೆಲವೇ ನಿಮಿಷ ಮೊದಲು ನಡೆದ ಅಸ್ತಿಭಾರ ಶಿಲೆ ಇಡುವ ಸಂದರ್ಭದ ಪೂಜೆಯ ಹೊತ್ತಿಗೆ ಎತ್ತಿದ ಆರತಿ ತಟ್ಟೆ ನೋಡಿ ಬಂದು ಅವರು ಮಾತಾಡುತ್ತಿದ್ದರು.

ಅರ್ಚಕರಿಗೆ ಎಲ್ಲಾ ಸೌಲಭ್ಯಗಳನ್ನೂ ಒದಗಿಸುವುದಕ್ಕೆ ತಮ್ಮ ಅಭ್ಯಂತರವಿಲ್ಲವೆಂದೂ ಆದರೆ ತಟ್ಟೆಯ ಹಣ ಸರ್ಕಾರಕ್ಕೆ ಸಲ್ಲಬೇಕಾದ ಅಗತ್ಯವಿದೆಯೆಂದೂ ಅವರು ಒತ್ತಿ ಹೇಳಿದರು. ಮುಜರಾಯಿ ಮಂತ್ರಿ ಸುಧೀಂದ್ರರಾವ್ ಕಸ್ಬೆ ಕೂಡ ಸಮಾರಂಭದಲ್ಲಿ ಹಾಜರಿದ್ದರು.

ಬಂಡೆಯಂಥ ಸರ್ಕಾರಿ ದೇಹದಲ್ಲಿ, ಕೊಡುವ ಕೈಗಿಂತ ತೆಗೆದುಕೊಳ್ಳುವ ಕೈ ನೂರಾರು ಪಟ್ಟು ಚುರುಕಾಗಿರುವುದರಿಂದ ಮಂತ್ರಿಗಳ ಚುರುಕು ಕಣ್ಣಿನ ಸಲಹೆಯ ಪರಿಣಾಮ ಕಾದು ನೋಡಲು ಯೋಗ್ಯ! ?

ರೈತ ರ್‍ಯಾಲಿಯ ಬಗ್ಗೆ ಡಾಕ್ಯುಮೆಂಟರಿ ಚಿತ್ರ

'ನಿದ್ದೆಯಲ್ಲಿರುವ ವಿಧಾನಸೌಧ ಎಬ್ಬಿಸುವ' ಕಾರ್ಯಕ್ರಮದಂತೆ ಈ ವರ್ಷ ಗಾಂಧಿ ಜಯಂತಿ ದಿನದಂದು ಬೆಂಗಳೂರಿನಲ್ಲಿ ನಡೆದ ರೈತರ ಬೃಹತ್ ಪ್ರದರ್ಶನದ ಸಾಕ್ಷ್ಯಚಿತ್ರವನ್ನು ಹಾಸನ ಜಿಲ್ಲೆಯ ಸಾಲಗಾಮೆ ಗ್ರಾಮದ ನಂಜುಂಡೇಗೌಡರ ನಿರ್ದೇಶನದಲ್ಲಿ ಚಿತ್ರೀಕರಿಸಲಾಗಿದೆ ಎಂದು ವರದಿಯಾಗಿದೆ.

ಈ ಡಾಕ್ಯುಮೆಂಟರಿ ಚಿತ್ರದ ಚಿತ್ರೀಕರಣ ನರಗುಂದ–ನವಲಗುಂದದಿಂದ ಪ್ರಾರಂಭವಾಗಿದ್ದು ಬೆಂಗಳೂರಿನಲ್ಲಿ ನಡೆದ ರೈತ ಪ್ರದರ್ಶನದಲ್ಲಿ ಪಾಲ್ಗೊಂಡ ರೈತರ ಮತ್ತು ಅವರ ಜಾಥಾದ ಸಂಪೂರ್ಣ ವಿವರಗಳನ್ನು ಸೆರೆಹಿಡಿಯಲಾಗಿದೆ. ಪ್ರಭು ಅವರ ಛಾಯಾಗ್ರಹಣವನ್ನೊಳಗೊಳ್ಳುವ ಈ ಚಿತ್ರ ೩೫ ಎಂ. ಎಂ ನಲ್ಲಿ ೩ ಸಾವಿರ ಅಡಿಗಳ ಉದ್ದವಿರುವುದೆಂದು ಹೇಳಲಾಗಿದೆ.

ನರಗುಂದ–ನವಲಗುಂದ ನಂತರ ಶಿವಮೊಗ್ಗ, ಹಾಸನ, ಮೈಸೂರು, ಮಂಡ್ಯ, ತುಂಕೂರು ಜಿಲ್ಲೆಗಳಲ್ಲಿ ಚಿತ್ರೀಕರಿಸಲಾಗಿದೆ.

ಓ ಗಾಂಧಿ!

ನೀ ಹಾಕಿಕೊಟ್ಟ ಹಾದಿ
ಬಿಟ್ಟು ಬೇರೆ ಹೋಗಿಲ್ಲ ಗಾಂಧಿ

ಅಲ್ಲಿಷ್ಟು ಇಲ್ಲಷ್ಟು ಗಲಭೆಗಳು
ಬಿಟ್ಟರೆ ಉಳಿದೆಲ್ಲ ಕಡೆ 'ಶಾಂತಿ' ತುಂಬಿದೆ ತಂದೆ

ಬೆಲೆ ಏರಿಕೆಯೊಂದು
ಬಿಟ್ಟರೆ ಬಾಳು 'ಸುಖ'ಮಯವಾಗಿದೆ ತಂದೆ

ಪಕ್ಷಾಂತರದ ಜಾಡ್ಯವೊಂದು
ಬಿಟ್ಟರೆ 'ಪುಡಾರಿ'ಗಳೆಲ್ಲ ಸತ್ಯವ್ರತರು ತಂದೆ

ಆಗಿಷ್ಟು ಈಗಿಷ್ಟು ಲಪಟಾಯಿಸುವುದು
ಬಿಟ್ಟರೆ 'ಉದ್ಧಾರ'ದ ಮಂತ್ರ ಮೊಳಗಿದೆ ತಂದೆ

ಪಕ್ಷದೊಳಗೆ ಕಿತ್ತಾಟಗಳು
ಬಿಟ್ಟರೆ ಎಲ್ಲರಲ್ಲೂ 'ಐ'ಕ್ಯ ತುಂಬಿದೆ ತಂದೆ

ಸರ್ವಾಧಿಕಾರದ ಅಮಲು
ಬಿಟ್ಟರೆ ಸಮಾಜವಾದಿ 'ಮಂತ್ರ' ಹಾಡುತ್ತಿದ್ದೇವೆ ತಂದೆ

ವಿಶ್ವವ್ಯಾಪಿ ಭ್ರಷ್ಟತೆಯೊಂದು
ಬಿಟ್ಟರೆ 'ಮಾಮೂಲಿ'ನಂತೆ ನಡೆಯುತ್ತಿದೆ ತಂದೆ

ಓ ಗಾಂಧಿ, ಸದ್ಯ
ನೀ ಸತ್ತು ಬದುಕಿದ್ದೀಯ
ನಾವು ಸತ್ತು ಬದುಕುತ್ತಿದ್ದೇವೆ.

—ಶ್ರೀಕಂಠ ಗುಂಡಪ್ಪ

(ಸೌಜನ್ಯ: 'ಆಂದೋಲನ' ಗಾಂಧಿ ಜಯಂತಿ ಸಂಚಿಕೆ.)

ಓದುಗರ ಪತ್ರಗಳು

ಕೃಷಿ ಇಲಾಖೆಯ ಶ್ಲಾಘನೀಯ ಕಾರ್ಯ

ಈ ವರ್ಷದ ಗಾಂಧೀ ಜಯಂತಿಯಿಂದ ೭ ದಿನಗಳ ಕಾಲ ಕೊಪ್ಪದ ಕೃಷಿ ಇಲಾಖೆಯವರು ತಾಲ್ಲೂಕಿನ ಅನೇಕ ಹಳ್ಳಿಗಳಲ್ಲಿ ನಡೆಸಿದ "ಕಾಂಪೋಸ್ಟ್ ಶಿಬಿರ" ಕಾರ್ಯಕ್ರಮ ಶ್ಲಾಘನೀಯ.

ಹೆಚ್ಚು ಜನಸಂಖ್ಯೆ ಹೊಂದಿರುವ ನಮ್ಮ ದೇಶ ಎದುರಿಸುತ್ತಿರುವ ಒಂದು ದೊಡ್ಡ ಸಮಸ್ಯೆ ಆಹಾರ ಸಮಸ್ಯೆ. ಈ ಸಮಸ್ಯೆಗೆ ರೈತನಿಂದಲೇ ಪರಿಹಾರ ಕಾಣಬೇಕಾಗಿದೆ. ಅಂದರೆ ರೈತರು ಹೆಚ್ಚು ಹೆಚ್ಚು ಬೆಳೆದು ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿಕೊಂಡು ದೇಶದ ಪ್ರಗತಿಯನ್ನು ಸಾಧಿಸಬೇಕಾಗಿದೆ. ಹೆಚ್ಚು ಬೆಳೆಯಲು ರೈತರು ಆಧುನಿಕ ಪದ್ಧತಿಗಳನ್ನನುಸರಿಸಲೇಬೇಕು.

ಈ ಆಧುನಿಕ ಪದ್ಧತಿಗಳನ್ನು ರೈತರಿಗೆ ತಿಳಿಸಿಕೊಡುವ ಜವಾಬ್ದಾರಿ ನಮ್ಮ ಕೃಷಿ ಇಲಾಖೆಯದು. ಅಂತೆಯೇ ಕೊಪ್ಪ ತಾ॥ ನಲ್ಲಿ ಕೃಷಿ ಇಲಾಖೆಯವರು ತಮ್ಮ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸುತ್ತಿರುವುದು ಸ್ವಾಗತಾರ್ಹ.

ಈ ವರ್ಷ ಗಾಂಧಿ ಜಯಂತಿಯಂದು ಕೆಸವೆ ಗ್ರಾಮದಿಂದ ಪ್ರಾರಂಭಿಸಿ ತಾಲ್ಲೂಕಿನ ಅತಿ ಮೂಲೆಯ ಪ್ರದೇಶವಾದ ಮೇಣಸಿನಹಾಡ್ಯದಲ್ಲಿ ತಮ್ಮ ಕಾಂಪೋಸ್ಟ್ ಶಿಬಿರ ಸಪ್ತಾಹ ಅಂತ್ಯಗೊಳಿಸಿದರು. ಈ ಮಧ್ಯೆ ಬೊಮ್ಲಾಪುರ, ಕಲ್ಕೆರೆ, ಮೇಲ್ಪಾಲ, ಹುಲುಮಗ್ಗಿ, ಜಯಪುರ ಮುಂತಾದ ಹಳ್ಳಿಗಳಿಗೆ ತಿರುಗಿ ರೈತರಿಗೆ ಆಧುನಿಕ ಕೃಷಿಯ ಬಗ್ಗೆ, ಮುಖ್ಯವಾಗಿ ಕಾಂಪೋಸ್ಟ್ ಗೊಬ್ಬರದ ತಯಾರಿಕೆಯ ಬಗ್ಗೆ ಸಹಾಯಕ ಕೃಷಿ ನಿರ್ದೇಶಕ ಎಂ.ಎಸ್. ಸುಬ್ಬಯ್ಯ ಗೌಡರು ರೈತರಿಗೆ ವಿವರಿಸಿ ಮಾರ್ಗದರ್ಶನ ನೀಡಿದರು.

ಎಲ್ಲಾ ಇಲಾಖೆಗಳಿಗೂ ಹಾಗೂ ಎಲ್ಲಾ ಅಧಿಕಾರಿಗಳಿಗೂ ಈ ಕಾರ್ಯ ಮೇಲ್ಪಂಕ್ತಿಯಾದೀತು. ಕೃಷಿ ಇಲಾಖೆಯವರು ಮುಂದೆಯೂ ಹೀಗೆಯೇ ಕಾರ್ಯಕ್ರಮಗಳನ್ನ ಹಮ್ಮಿಕೊಳ್ಳಲೆಂದು ನನ್ನ ಹಾರೈಕೆ. ಹಾಗೆಯೇ ಒಂದು ಮಾತು—ಇಲ್ಲಿನ ಮಣ್ಣು-ಹವೆಯ ವೈಶಿಷ್ಟ್ಯಗಳೇನು, ರೈತರ ಅವಶ್ಯಕತೆಗಳೇನು—ಸಮಸ್ಯೆಗಳೇನು ಎಂಬುದನ್ನೆಲ್ಲ ಅರ್ಥಮಾಡಿಕೊಳ್ಳುತ್ತ ಇಲಾಖೆಯವರು ರೈತರೊಡನೆ ವ್ಯವಹರಿಸಲಿ.

—ಮಾ.ಶೀ. ಗಣಪತಿ, ಮೇಲುಬಿಲರೆ.

ಹೆಂಚು ಅಕ್ರಮ ವಿಲೆ ವರದಿ ಬಗ್ಗೆ ಸ್ಪಷ್ಟೀಕರಣ

ಮಾನ್ಯರೆ,

ತಾ. ೧೦-೧೦-೮೧ರ ನಿಮ್ಮ ಪತ್ರಿಕೆಯಲ್ಲಿ "ಜನತಾ ಸೈಟಿನ ಹೆಂಚು ಅಕ್ರಮ ವಿಲೆ ಆರೋಪ" ಎಂಬ ಶೀರ್ಷಿಕೆಯಡಿ ಪ್ರಕಟವಾದ ವರದಿಯ ಬಗ್ಗೆ ಸ್ಪಷ್ಟೀಕರಣ:

ನನಗೆ ಮಂಜೂರಾಗಿದ್ದ ಹೆಂಚುಗಳನ್ನು ನನ್ನ ಮನೆಗೆ ಹಾಕಲು ಶೇಖರಿಸಿಟ್ಟಿದ್ದೆ. ಒಂದು ದಿನ ವಿಪರೀತ ಮಳೆ ಬಂದು, ಗ್ರಾಮದ ಗಣ್ಯ ವ್ಯಕ್ತಿಗಳಲ್ಲೊಬ್ಬರ ಮನೆ ಅಡಿಕೆ ಒಲೆ ಗೋಡೆಗೆ ಮಳೆ ನೀರು ಬಿದ್ದು ಅಪಾಯವಾಗುವ ಸಂಭವವಿದ್ದಾಗ ಒಂದೆರಡು ದಿನಗಳಲ್ಲೆ ವಾಪಸ್ ಕೊಡುವುದಾಗಿ ತಿಳಿಸಿ ನನ್ನಲ್ಲಿರುವ ಕೆಲವು ಹಂಚುಗಳನ್ನು ಕೇಳಿದ್ದರಿಂದ, ನಾನು ಉಪಯೋಗಿಸದೇ ಶೇಖರಿಸಿಟ್ಟಿದ್ದ ಹಂಚುಗಳಲ್ಲೆ ಕೆಲವನ್ನು ಕೊಟ್ಟಿದ್ದೇನೋ ನಿಜ. ಮೇಲ್ಕಂಡವರು ೨-೩ ದಿನಗಳಲ್ಲೆ ಸದರಿ ಹಂಚುಗಳನ್ನು ವಾಪಸ್ ತಂದುಕೊಟ್ಟಿರುತ್ತಾರೆ. ಇಷ್ಟಲ್ಲದೇ ಇದರಲ್ಲಿ ಮುಗ್ಧ ಬಡವರನ್ನು ದಾರಿ ತಪ್ಪಿಸುವ ವ್ಯವಹಾರವೇನೂ ನಡೆದಿಲ್ಲ. ಈಗಲೂ ಸಹಾ ನನಗೆ ಮಂಜೂರಾದ ಪೂರಾ ಹೆಂಚುಗಳನ್ನು ಯಾರು ಬೇಕಾದರೂ, ಯಾವಾಗ ಬೇಕಾದರೂ ಬಂದು ನನ್ನ ಮನೆಯಲ್ಲಿ ಶೇಖರಿಸಿಟ್ಟಿರುವುದನ್ನು ನೋಡಬಹುದಾಗಿರುತ್ತೆ. ಶಿವಾನಂದ ಯುವಕ ಸಂಘದವರು ಕೇವಲ ದುರುದ್ದೇಶದಿಂದ ನನ್ನ ಮೇಲೆ ಆರೋಪ ಹೊರಿಸಿ ಪೊಳ್ಳು ಪ್ರಕಟಣೆ ಕೊಟ್ಟಿರುತ್ತಾರೆಂಬ ಸತ್ಯಾಂಶತಮಗೆ ತಿಳಿಸುತ್ತೇನೆ.

— ಶೀನಪ್ಪ ಶೆಟ್ಟಿ,
ಗುಣವಂತೆ, ಕೊಪ್ಪ ತಾಲ್ಲೂಕು.

(ಇವರೆ ಎ. ಹೆ. ಗುರುತಿಗೆ ಜಿ. ವಿ. ರಾಮಸ್ವಾಮಿಯ ಬರಹ)

ರಸ್ತೆ ದುರಸ್ತಿ ಆಗಲಿ

ಮಾನ್ಯರೆ,

ಶಾನೊಳ್ಳಿ-ಹುಲುಗಾರು ರಸ್ತೆಯಲ್ಲಿ ಶಾನೊಳ್ಳಿಯ ಹತ್ತಿರ ರಸ್ತೆಯ ಮೇಲ್ಗಡೆ ದರೆ ಜರಿದು ದಾರಿ ಕಟ್ಟಿದೆ. ತಿರುಗಾಡುವುದಕ್ಕೂ ಹೆದರಿಕೆ ಆಗುವ ಮಟ್ಟದಲ್ಲಿದೆ. ಕೂಡಲೇ ದುರಸ್ತಿ ಮಾಡದಿದ್ದರೆ ಜನರಿಗೆ, ಶಾಲೆ ಮಕ್ಕಳಿಗೆ ದಾರಿಯೇ ಇಲ್ಲವಾಗುತ್ತದೆ. ಹುಲುಗಾರು ಹೊರ ಪ್ರಪಂಚದ ಸಂಪರ್ಕ ಕಳೆದು ಕೊಳ್ಳುವ ಮೊದಲು ಸಂಬಂಧ ಪಟ್ಟವರು ರಸ್ತೆ ದುರಸ್ತಿ ಮಾಡುತ್ತಾರೆಂದು ಕಾಯುತ್ತಿದ್ದೇವೆ.

—ಗ್ರಾಮಸ್ಥರು,
ಹುಲುಗಾರು, ಬಿಲಗದ್ದೆ ಗ್ರಾಮ.

ನಮ್ಮ ೧೦-೧೦-೮೧ ರ ಸಂಚಿಕೆಯಲ್ಲಿ ಪ್ರಕಟವಾದ 'ಮದುವೆ ಮಂಗಳ ಧಾಮ' ದ ವಿಳಾಸವನ್ನು ಕೆಲವರು ವಿಚಾರಿಸಿದ್ದಾರೆ. ಅದು ಹೀಗಿದೆ: ಮದುವೆ ಮಂಗಳ ಧಾಮ, ನಂ. ೪, ಶಂಕರಮಠದರಸ್ತೆ, ಶಂಕರಪುರಂ, (ರಂಗನಾಥ ವಾಣಿಜ್ಯ ವಿದ್ಯಾಶಾಲೆಯ ಹಿಂಭಾಗ), ಬೆಂಗಳೂರು—೪.

ಅದೇ ಸಂಚಿಕೆಯಲ್ಲಿ ಪ್ರಕಟವಾದ 'ಸಿಪ್ಪೆ ಒಲೆ' ಕುರಿತ ಲೇಖನ ಹಲವಾರು ಜನರಿಗೆ ಉಪಯುಕ್ತವಾದೀತೆಂಬ ಆಸೆಯಿಂದ ೫೦-೬೦ ರೂ. ಖರ್ಚುಮಾಡಿ ಚಿತ್ರದ ಬ್ಲಾಕ್ ಮಾಡಿಸಿ ಪ್ರಕಟಿಸಿದ್ದೇವೆ. ಕೆಲವರಾದರೂ ರೈತರು ಸಿಪ್ಪೆ ಒಲೆ ನಿರ್ಮಿಸಿ ಉಪಯೋಗ ಪಡೆದರೆ ನಮ್ಮ ಖರ್ಚು, ಶ್ರಮ ಸಾರ್ಥಕವಾಗುತ್ತದೆ. ಹಾಗೆ ಸಿಪ್ಪೆ ಒಲೆ ಕಟ್ಟಿದವರು ಅದರ ಉಪಯುಕ್ತತೆ — ಅನುಪಯುಕ್ತತೆ ಬಗ್ಗೆ ತಪ್ಪದೆ ನಮಗೆ ಬರೆದು ತಿಳಿಸಬೇಕಾಗಿ ಕೋರಿಕೆ.

—ಸಂಪಾದಕ.

---

೨೭ ಕೈಗಾರಿಕೆಗಳ ಬಗ್ಗೆ ರಾಜ್ಯ ಸರ್ಕಾರ ಹೊರಡಿಸಿದ್ದ

ಕನಿಷ್ಠ ವೇತನ ಆಜ್ಞೆ ರದ್ದು

ಪ್ಲಾಂಟೇಶನ್, ಸಿನಿಮಾ, ಹೋಟೆಲ್, ಊದುಬತ್ತಿ, ಮುದ್ರಣ, ಕ್ಯೂರಿಂಗ್ ವರ್ಕ್ಸ್ ಮುಂತಾದ ೨೭ ಕೈಗಾರಿಕೆಗಳ ಕಾರ್ಮಿಕರ ಕನಿಷ್ಠ ವೇತನವನ್ನು ನಿಗದಿಗೊಳಿಸಿ ರಾಜ್ಯ ಸರ್ಕಾರ ಈ ವರ್ಷ ಮಾರ್ಚ್ ಮತ್ತು ಏಪ್ರಿಲ್‌ನಲ್ಲಿ ಜಾರಿಗೊಳಿಸಿದ್ದ ಆಜ್ಞೆಗಳನ್ನು ಅ. ೧೫ ರಂದು ರಾಜ್ಯ ದ ಶ್ರೇಷ್ಠ ನ್ಯಾಯಾಲಯ ರದ್ದುಪಡಿಸಿತು.

ಈ ಬಗ್ಗೆ ಸಲ್ಲಿಸಲಾಗಿದ್ದ ೫೦೦ ಕ್ಕೂ ಹೆಚ್ಚು ರಿಟ್ ಅರ್ಜಿಗಳ ಸಂಬಂಧದಲ್ಲಿ ನ್ಯಾಯಮೂರ್ತಿ ಬೋಪಣ್ಣ ಈ ತೀರ್ಪು ನೀಡಿದರು. ಸಂಬಂಧಿತರಿಂದ ಬಂದಿರುವ ವಿಪುಲ ಮನವಿಗಳನ್ನು ಪರಿಗಣಿಸಿ ಈ ವರ್ಷದ ಡಿಸೆಂಬರ್ ೩೧ ರೊಳಗೆ ಹೊಸದಾಗಿ ಆಜ್ಞೆ ಹೊರಡಿಸುವಂತೆ ನ್ಯಾಯಾಲಯ ಸರ್ಕಾರಕ್ಕೆ ಆದೇಶಿಸಿತು.

ಈ ಬಗ್ಗೆ ಸರ್ಕಾರ ನೇಮಿಸಿದ್ದ ಸಲಹಾ ಸಮಿತಿಯಲ್ಲಿ ಸರ್ಕಾರಿ ಅಧಿಕಾರಿಗಳು ಸದಸ್ಯರಾಗಿದ್ದು, ಸ್ವತಃ ಕಾರ್ಮಿಕ ಮಂತ್ರಿಗಳೇ ಅದರ ಅಧ್ಯಕ್ಷರಾಗಿದ್ದುದರಿಂದ ಅಧಿಕಾರಿಗಳು ಸ್ವತಂತ್ರವಾಗಿ ತಮ್ಮ ಅಭಿಪ್ರಾಯಗಳನ್ನು ಮಂಡಿಸಲು ಸಾಧ್ಯವಾಗಿಲ್ಲ. ಇದರಿಂದಾಗಿ ಸಮಿತಿಗೂ ಸರ್ಕಾರಕ್ಕೂ ಮಧ್ಯೆ ಅರ್ಥಪೂರ್ಣ ಸಮಾಲೋಚನೆ ನಡೆದಿಲ್ಲ ಎಂಬುದಾಗಿ ನ್ಯಾಯಾಲಯ ಅಭಿಪ್ರಾಯಪಟ್ಟಿತು.

ಜಕನೂರ್ ರಾಜೀನಾಮೆಗೆ ಆಗ್ರಹ

ಸಮಿತಿ ರಚನೆಯಲ್ಲಿ ಇಂಥ ಆಕ್ಷೇಪಣೆಗೆ ಗುರಿಯಾಗುವಂಥ ತಾಂತ್ರಿಕ ತಪ್ಪು ಮಾಡಿ ರಾಜ್ಯದ ಕಾರ್ಮಿಕ ಮಂತ್ರಿ ಎ. ಬಿ. ಜಕನೂರ್‌ರವರು ಬೇಕೆಂದೇ ಮಾಲೀಕರುಗಳಿಗೆ ಸಹಾಯ ಮಾಡಿದ್ದಾರೆ, ಕಾರ್ಮಿಕರಿಗೆ ದ್ರೋಹ ಬಗೆದಿದ್ದಾರೆ ಎಂದು ಆಪಾದಿಸಿರುವ ಕಾರ್ಮಿಕ ಸಂಘಟನೆಗಳು, ಕೂಡಲೇ ಅವರನ್ನು ವಜಾಮಾಡಬೇಕೆಂದೂ, ಹೊಸದಾಗಿ ಕನಿಷ್ಠ ವೇತನ ಕೂಡಲೇ ನಿಗದಿ ಮಾಡಬೇಕೆಂದೂ ಸರ್ಕಾರವನ್ನು ಒತ್ತಾಯಿಸಿವೆ.

ಲೋಕೋಪಯೋಗಿ ಇಲಾಖೆ ಕಾಮಗಾರಿ

(೧ನೇ ಪುಟದಿಂದ)

ರಸ್ತೆಗಳು

೧. ಶೃಂಗೇರಿಯಿಂದ ಕುದ್ರೆಮುಖ-ಮಂಗಳೂರು ರಸ್ತೆಗೆ ದ. ಕ. ಗಡಿಯಲ್ಲಿ ಸಂಪರ್ಕ ಕಲ್ಪಿಸುವ **ಶೃಂಗೇರಿ – ನೆಮ್ಮಾರು– ಮರ್ಕಲ್ – ಗಣಪತಿಕಟ್ಟೆ ರಸ್ತೆ**ಯಲ್ಲಿ ಹೊನ್ನೆಕಡಿಹಳ್ಳ ಸೇತುವೆಗಾಗಿ ೪ ಲಕ್ಷ ಹಾಗೂ ಉಳಿಕೆ ೪ ಕಿ.ಮೀ.ರಸ್ತೆಗಾಗಿ ೪.೫೫ ಲಕ್ಷ ರೂ. ಗಳ ಯೋಜನೆಯ ಕೆಲಸ ಮುಂದುವರಿದಿದೆ. ಸೇತುವೆ ಮುಗಿದಿದೆ. ರಸ್ತೆ ಕಡಿದು ಆಗಿದ್ದು, ಜಲ್ಲಿ ಆಗುತ್ತಿದೆ. ಈಗಾಗಲೇ ೫.೫ ಲಕ್ಷ ರೂ. ಖರ್ಚಾಗಿದ್ದು, ಡಿಸೆಂಬರ್ ವೇಳೆಗೆ ಕಾಮಗಾರಿ ಮುಗಿಯಲಿದೆ.

ಈ ರಸ್ತೆಗೆ ಡಾಮರು ಹಾಕಿಸುವ ಬಗ್ಗೆ ೨೮ ಲಕ್ಷ ರೂ.ಗಳ ಕರಡು ಯೋಜನೆ ಸಿದ್ಧವಾಗಿದೆ. ಆದರೆ ಅದು ಮಂಜೂರಾಗಿ ಬರಬೇಕಾದರೆ "ಇನ್ನೂ ಬಹಳ ಕೆಲಸ ಆಗಬೇಕಿದೆ" ಎನ್ನುತ್ತಾರೆ ವೆಂಕಟಯ್ಯ.

೨. ಕಾವಡಿ– ಶಾನುವಳ್ಳಿ ರಸ್ತೆಯ ಸುಧಾರಣೆ: ಜಲ್ಲಿ,ಟಾರ್ ಎಲ್ಲ ಸೇರಿ ೩ ಲಕ್ಷ ರೂ. ಗಳ ಕಾಮಗಾರಿಗಾಗಿ ಟೆಂಡರ್ ಬಂದಿದೆ.

೩. ಶೃಂಗೇರಿಯಿಂದ ಮೇಗುಂದಾ ಹೋಬಳಿಯ ಕಲ್ಲುಗುಡ್ಡೆ ಮುಂತಾದ ಕಡೆ ಸಂಪರ್ಕ ಕಲ್ಪಿಸುವ ೨೮ ಕಿ. ಮೀ. ರಸ್ತೆಯ ಸುಧಾರಣೆ ಮತ್ತು ಜಕ್ಕಾರು ಕುಡಿಗೆ ಹಳ್ಳದ ಸೇತುವೆಗಾಗಿ ೧.೫ ಲಕ್ಷದ ಕಾಮಗಾರಿ ನಡೆಯುತ್ತಿದೆ.

೪. ಬಾಳಗಡಿ– ಮೇಲ್ಪಾಲ್– ಬಾಳೆಹೊನ್ನೂರು ರಸ್ತೆಯಲ್ಲಿ ೨.೫ ಕಿ. ಮೀ. ಜಲ್ಲಿ,ಟಾರು ವಗೈರೆ ರಿಪೇರಿಗಾಗಿ ೨ ಲಕ್ಷದ ಕಾಮಗಾರಿ ಮಂಜೂರಾಗಿದೆ.

೫. ಶೃಂಗೇರಿ– ನೆಮ್ಮಾರು– ಕೆರೆಕಟ್ಟೆ (೩೦ ಕಿ. ಮೀ. ಉದ್ದದ) ರಸ್ತೆಯ ೧೫-೨೦ ದ ೧೫.೫ ಕಿ.ಮೀ.ವರೆಗೆ ರಿಪೇರಿ: ೩ ಲಕ್ಷ ರೂ. ನ ಕೆಲಸ ಮುಗಿದಿದೆ.

೬. ಬೇಗಾರು–ಕಲ್ಮನೆ ರಸ್ತೆಯಲ್ಲಿ ೩ ಕಿ. ಮೀ. ಟಾರು ಹಾಕುವ ೨ ಲಕ್ಷದ ಕಾಮಗಾರಿಗೆ ಟೆಂಡರ್ ಬಂದಿದೆ.

ಸೇತುವೆಗಳು – ಮೋರಿಗಳು.

೧. ಕಿಗ್ಗ ಹೋಬಳಿಯ ಕೋಗಿನ ಬೈಲು-ತಲುವಂತಿ ರಸ್ತೆಯಲ್ಲಿ ಮಾಲತಿ ನದಿಗೆ ೧ ಲಕ್ಷ ರೂ. ವೆಚ್ಚದ ಸೇತುವೆ ಉಕ್ಕಿನ ಸರಬರಾಜು ಆದ ಕೂಡಲೇ (ಬಹುಶಃ ಇನ್ನು ಒಂದು ತಿಂಗಳಲ್ಲಿ) ಮುಗಿಯಲಿದೆ.

೨. ೩.೮೭ ಲಕ್ಷ ರೂ. ವೆಚ್ಚದ ಮುಡುಬ ಹಳ್ಳ ಸೇತುವೆಗೆ ಅ. ೧೫ಕ್ಕೆ ಟೆಂಡರ್ ಬಂದಿದೆ.

೩. ಅಲಗೇಶ್ವರ ಹಳ್ಳದ ಸೇತುವೆ ಮತ್ತು ರಸ್ತೆ ಸೇರಿ ೩ ಲಕ್ಷ ರೂ. ಕೆಲಸಕ್ಕೆ ಟೆಂಡರ್ ಬಂದಿದೆ. ಅ.೧೭ ರಂದು ಕಾಗೋಡು ತಿಮ್ಮಪ್ಪನವರಿಂದ ಶಂಕುಸ್ಥಾಪನೆ ನಡೆಯಬೇಕಿತ್ತು. ನಡೆಯಲಿಲ್ಲ.

೪. ನ. ರಾ. ಪುರ ತಾ॥ ಹೆಲಸೂರು-ಕಬ್ಬಿನ ಮನೆ ರಸ್ತೆಯ ತಣ್ಣೀರುಹಳ್ಳ ಸೇತುವೆಯ ೧.೭೭ ಲಕ್ಷ ರೂ. ಕೆಲಸಕ್ಕಾಗಿ ಟೆಂಡರ್ ಬಂದಿದೆ.

೫. ಚಿಕ್ಕಮಗಳೂರು — ನ. ರಾ. ಪುರ ಹಳೇ ರಸ್ತೆ ೩೫ ನೇ ಮೈಲಿಯಿಂದ ೩೦ ನೇ ಮೈಲಿವರೆಗೆ (ಮುತ್ತಿನಕೊಪ್ಪದ ಭಾಗ) ಕೂಸಗಲ್(ಹೆಬ್ಬೆ) ಮೂಲಕ ೯ ಕಿ. ಮೀ. ಬಳಸು ರಸ್ತೆ ನಿರ್ಮಾಣ: ಭದ್ರಾ ಯೋಜನೆಯವರು ೩೧.೩ ಲಕ್ಷ ರೂ. ಗಳ ಹಣವನ್ನು ಕಟ್ಟಿದ್ದಾರೆ. ಕಾಮಗಾರಿಗೆ ಟೆಂಡರ್ ಕರೆದಿದೆ. (ಜಲಾವೃತವಾಗುವ ಭದ್ರಾ ನದಿಗೆ ಒಂದು ಸೇತುವೆ ಆಗಬೇಕಾಗಿದೆ.)

೬. ನ. ರಾ. ಪುರ ತಾಲೂಕಿನ ಮಠಕಾಡಿ ಹತ್ತಿರ ಬಾಳೆಹಳ್ಳಕ್ಕೆ ಹಾಗೂ ಶೆಟ್ಟಿಕೊಪ್ಪ ಬೆಳ್ಳಂಗಿ ರಸ್ತೆಯಲ್ಲಿ ವಾಟೆಹಳ್ಳಕ್ಕೆ—ಹೀಗೆ ಎರಡು ಏಕಮುಖಸೇತುವೆಗಳಿಗೆ(ಸಿಂಗಲ್ ಲೈನ್—೧೫ ಅಡಿ ಅಗಲ) ತಲಾ ೧.೪೯ ಲಕ್ಷ ರೂ. ಮಂಜೂರಾಗಿದ್ದು ಟೆಂಡರ್ ಬಂದಿದೆ.

(ಆನೇ ಪುಟಕ್ಕೆ)

ವೇತನ ಹೆಚ್ಚಳಕ್ಕಾಗಿ ತೋಟ ಕಾರ್ಮಿಕರ ಸತ್ಯಾಗ್ರಹ ಸಿದ್ಧತೆ

ಜಯಪುರ : ಹೈಕೋರ್ಟ್ ತೀರ್ಪಿನಿಂದಾಗಿ ರದ್ದಾಗಿರುವ, ಕನಿಷ್ಠ ವೇತನದ ಬಗೆಗಿನ ಸರ್ಕಾರಿ ಆಜ್ಞೆಯ ರೀತ್ಯಾ ನಿಗದಿ ಮಾಡಲಾಗಿದ್ದ ೮.೫೦ ರೂ. ಕನಿಷ್ಠ ವೇತನ ಕೂಡ ನ್ಯಾಯಕ್ಕೆ ವಿರೋಧವಾದ್ದಾಗಿತ್ತು; ಸಲಹಾ ಸಮಿತಿಯವರು ತಮಗಿಷ್ಟ ಬಂದ ರೀತಿ ನಿಗದಿ ಮಾಡಿದ್ದಾಗಿತ್ತು ಎಂದು ಇಲ್ಲಿನ 'ಕರ್ನಾಟಕ ಎಸ್ಟೇಟ್ ಲೇಬರ್ ಯೂನಿಯನ್' ವರ್ಣಿಸಿದೆ.

ಒಪ್ಪಂದ ವೇತನವನ್ನು ಹೆಚ್ಚಿಸುವಂತೆ ತಮ್ಮ ಸಂಘ ಸೆ. ೭ರಂದು ಮಾಲೀಕರ ಸಂಘಕ್ಕೂ ಮ್ಯಾನೇಜ್‌ಮೆಂಟಿನವರಿಗೂ ಕೊಟ್ಟ ನೋಟೀಸಿಗೆ ಯಾವ ಉತ್ತರವೂ ಬರದಿರುವುದರಿಂದ ಅ. ೨೫ರಂದು ಒಂದು ದಿನದ ಸಾಂಕೇತಿಕ ಮುಷ್ಕರದ ನಂತರವೂ ಮಾಲೀಕ ವರ್ಗ ಒಪ್ಪಂದಕ್ಕೆ ಮುಂದೆ ಬರದಿದ್ದಲ್ಲಿ ನವೆಂಬರ್ ೧೫ರಿಂದ ಸತ್ಯಾಗ್ರಹ ಹೋರಾಟ ನಡೆಸಲು ಸಿದ್ಧರಾಗಿರಬೇಕೆಂದು ಯೂನಿಯನ್ನಿನ ಪ್ರಧಾನ ಕಾರ್ಯದರ್ಶಿ ಪಿ.ಪಿ.ಎಸ್. ಮಣಿ ಕಾರ್ಮಿಕರನ್ನು ವಿನಂತಿಸಿದ್ದಾರೆ.

ಸಿದ್ಧರ ಮಠದಲ್ಲಿ ಕಾಂಪೋಸ್ಟ್ ಶಿಬಿರ

ಸಿದ್ಧರ ಮಠ: ಇಲ್ಲಿನ ಸಿದ್ದೇಶ್ವರ ಯುವಕ ಸಂಘದ ಆಶ್ರಯದಲ್ಲಿ ಕೊಪ್ಪದ ಕೃಷಿ ಇಲಾಖೆಯವರು ಅ. ೨೨ ರಂದು ಕಾಂಪೋಸ್ಟ್ ಗೊಬ್ಬರದ ತಯಾರಿಕೆಯ ತರಬೇತಿ ಶಿಬಿರ ಏರ್ಪಡಿಸಿದ್ದರು. ತಾ|| ಯುವಜನ ಒಕ್ಕೂಟದ ಅಧ್ಯಕ್ಷ ಹೆಚ್.ಎಂ. ಶ್ರೀಧರ್ ಅಧ್ಯಕ್ಷತೆ ವಹಿಸಿದ್ದರು ಕೊಪ್ಪದ ಎಸಿಎಫ್‌ಓ ಎಲ್. ಡಿ.ತಿವಾರಿ, ಪಶು ವೈದ್ಯಾಧಿಕಾರಿ ಕೆ. ಜಿ. ಶ್ರೀನಿವಾಸಮೂರ್ತಿ, ಕೆಲಕುಳಿ ಗ್ರಾಮ ಪಂಚಾಯ್ತಿ ಉಪಾಧ್ಯಕ್ಷ ಲಾರೆನ್ಸ್ ಡಯಾಸ್ ಮುಖ್ಯ ಅತಿಥಿಗಳಾಗಿದ್ದರು. ಎಂ. ಎಸ್. ಸುಬ್ಬಯ್ಯ ಗೌಡ ಕಾಂಪೋಸ್ಟ್ ಬಗ್ಗೆ ಮಾಹಿತಿ ನೀಡಿದರು.

ತೋಟಗಾರಿಕೆ ಇಲಾಖೆಯವರು ತೆಂಗಿನ ಸಸಿಗಳನ್ನು ಹಂಚಿದರು.

ಸಿದ್ದೇಶ್ವರ ಯುವಕ ಸಂಘ ಕಳೆದ ವರ್ಷ ಕಾಂಪೋಸ್ಟ್ ಗೊಬ್ಬರ ತಯಾರಿಸಿದ್ದು, ಅದರ ಹರಾಜಿನಿಂದ ೧೦೦ ರೂ. ಆದಾಯ ಪಡೆದಿದೆಯೆಂದು ಸಂಘದ ಅಧ್ಯಕ್ಷ ಹೆಚ್. ಎಂ. ಶ್ರೀಧರ್ ತಿಳಿಸಿದ್ದಾರೆ.

ಬಡವರನ್ನು ಬಾಳಲು ಬಿಡದವರು

(೧ನೇ ಪುಟದಿಂದ)

ಮುದ್ದನ ಮಕ್ಕಳು ತಮ್ಮ ದರ್ಖಾಸ್ತು ಜಾಗದಲ್ಲಿ ಮನೆ ಕಟ್ಟಲು ಹೋದರೆ ಸ್ವತಃ ಜಮೀನ್ದಾರರಾದ ಗ್ರಾಮಾಧ್ಯಕ್ಷರು "ಸಾಗುವಳಿ ಚೀಟಿ ತಾ" ಎನ್ನುತ್ತಾರಂತೆ. "ಊರಿನ ಬಲಿಷ್ಠರೆಲ್ಲ ಒಂದಾಗಿ ಹಿಂಸೆ ಕೊಡುತ್ತಿದ್ದಾರೆ. ಪೋಲೀಸರಾಗಲಿ, ತಹಸೀಲ್ದಾರರಾಗಲಿ ರಕ್ಷಣೆ ಕೊಡುತ್ತಿಲ್ಲ. ಅರ್ಜಿ ಬರೆದು ಸಾಕಾಗಿದೆ." ಎಂದಿರುವ ನೊಂದ ದಲಿತರು, "ಹರಿಜನರು, ಹಿಂದುಳಿದವರು ಎಚ್ಚೆತ್ತರೆ, ಸ್ವಂತ ಕಾಲ ಮೇಲೆ ನಿಲ್ಲಲು ಪ್ರಯತ್ನ ಪಟ್ಟರೆ ಇವರು ಬದುಕಲು ಬಿಡುವುದಿಲ್ಲ" ಎಂಬ, ಈ ದೇಶದ ಪರಂಪರೆಯ ಸತ್ಯವನ್ನು ಎತ್ತಿ ಹೇಳಿದ್ದಾರೆ.

ಜಾಗದ ಜಗಳ ಹೊಡೆದಾಟದ ಮಟ್ಟ ಮುಟ್ಟುತ್ತಿದ್ದು, ಜಿಲ್ಲಾಧಿಕಾರಿಗಳು ಹಾಗೂ ಸರ್ಕಾರ ರಕ್ಷಣೆ ಕೊಡಬೇಕೆಂದು ಕೋರಿರುವ ನೊಂದ ಕುಟುಂಬ, ಸಾವು-ನೋವು ಆದರೆ ಇವರೇ ಜವಾಬ್ದಾರರಾಗುತ್ತಾರೆಂದು ಎಚ್ಚರಿಸಿದ್ದಾರೆ.

ನೆರೆ ಪರಿಹಾರಕ್ಕೆ ಒತ್ತಾಯಿಸಿ ಭಾಜಪಾ ಸತ್ಯಾಗ್ರಹ

ತೀರ್ಥಹಳ್ಳಿ: ಭಾ.ಜ.ಪಾ.ದ ಆರಗ ಸ್ಥಾನೀಯ ಸಮಿತಿಯು ನೆರೆಯಿಂದ ನೊಂದವರಿಂದ ತಾ|| ಕಚೇರಿಗೆ ಜಾಥಾ ಸಂಘಟಿಸಿತ್ತು. ಘೋಷಣೆಗಳೊಂದಿಗೆ ವೇರವಣಿಗೆಯಲ್ಲಿ ಬಂದ ರೈತರು, ನಿರ್ದಿಷ್ಟ ದಿನದೊಳಗೆ ಪರಿಹಾರ ಹಂಚಬೇಕೆಂದು ಒತ್ತಾಯಿಸಿ ಧರಣಿ ಕುಳಿತಾಗ ದೂರವಾಣಿ ಮೂಲಕ ಮೇಲಧಿಕಾರಿಗಳನ್ನು ಸಂಪರ್ಕಿಸಿದ ತಹಸೀಲ್ದಾರ್‌ರವರು, ಅ.೨೫ ರೊಳಗೆ ಪೂರ್ತಿ ಪರಿಹಾರ ಹಂಚುವುದಾಗಿ ಭರವಸೆ ಕೊಟ್ಟನಂತರ ಧರಣಿ ನಿಲ್ಲಿಸಲಾಯಿತು. ಸತ್ಯಾಗ್ರಹದ ಮುಖಂಡತ್ವ ವಹಿಸಿದ್ದ ಸ್ಥಾನೀಯ ಸಮಿತಿ ಕಾರ್ಯಕರ್ತರಿಗೆ ತಾ|| ಸಮಿತಿ ಮುಖಂಡರು ಮಾರ್ಗದರ್ಶನ ನೀಡಿದರು.

ಕಾರು ಕಳ್ಳರಿಗೆ ಶಿಕ್ಷೆ

ನ.ರಾ.ಪುರ : ಹಲವಾರು ಕಡೆ ಕಾರು ಕಳ್ಳತನ ನಡೆಸಿ ಈಚೆಗೆ ಬಾಳೆಹೊನ್ನೂರಿನಲ್ಲಿ ೩ ಕಾರು ಕದಿಯಲು ವಿಫಲ ಪ್ರಯತ್ನ ನಡೆಸಿ ಪೋಲೀಸರಿಂದ ದಸ್ತಗಿರಿಯಾಗಿದ್ದ ಕೊಡಗಿನ ಗಣೇಶ ಮತ್ತು ಆರ್ಮುಗಂ ಎಂಬಿಬ್ಬರು ಅಪರಾಧಿಗಳಿಗೆ ಇಲ್ಲಿನ ಪ್ರ.ದ. ನ್ಯಾಯಾಧೀಶರು ೧ ವರ್ಷದ ಸಜೆ ವಿಧಿಸಿದ್ದಾರೆ.

ಜಫ್ತಿ ಪ್ರಕರಣಗಳ ವಿವರ ರೈತ ಸಂಘದಿಂದ ಕೋರಿಕೆ

ತೀರ್ಥಹಳ್ಳಿ : ಸಹಕಾರಿ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳು ಬಾಕಿದಾರ ರೈತರಿಂದ ಜಫ್ತಿ ಮಾಡಿದ ಚರಾಸ್ತಿ ಮಾಲುಗಳನ್ನು ಹಿಂದಕ್ಕೆ ಕೊಡುವ ಬಗ್ಗೆ ರೈತ ಸಂಘದೊಂದಿಗೆ ಚರ್ಚಿಸಲು ಸರ್ಕಾರ ಒಪ್ಪಿದ್ದು, ಇಂಥ ಪ್ರಕರಣಗಳ ಪೂರ್ಣ ಮಾಹಿತಿಯನ್ನು ಒದಗಿಸುವಂತೆ ಕರ್ನಾಟಕ ರಾಜ್ಯ ರೈತ ಸಂಘ ತನ್ನ ಎಲ್ಲಾ ತಾಲ್ಲೂಕು ಘಟಕಗಳನ್ನು ಕೇಳಿದೆಯೆಂದು ರೈತ ಸಂಘದ ವಕ್ತಾರರು ತಿಳಿಸಿದ್ದಾರೆ.

ಲಂಚಕಕ್ಕಿದಪ್ರಸಂಗ (೨ನೆ ಪುಟದಿಂದ)

ತಕ್ಷಣ ಆ ನೌಕರರನ್ನು ವಜಾಮಾಡುವುದಾಗಿ ಭರವಸೆ ಕೊಟ್ಟರು.

ಅಧಿಕಾರಿಗಳು—ನೌಕರರು ತಮ್ಮ ಕರ್ತವ್ಯ ಮಾಡಲು ಲಂಚ ಕೇಳಿದರೆ ರೈತ ಸಂಘಕ್ಕೆ ತಿಳಿಸಬೇಕೆಂದು ಕಾರ್ಯಕರ್ತರು ಮನವಿ ಮಾಡಿದ್ದಾರೆ.

ಕೊರ್ಡ ಹಿತ್ಲಿನಲ್ಲಿ ನ. ೪ ರಂದು ಉದರದರ್ಶಕ ಸಂತಾನ ಹರಣ ಶಸ್ತ್ರ ಚಿಕಿತ್ಸಾ ಶಿಬಿರ

ಕೊಪ್ಪ: ಇಲ್ಲಿನ ಲಯನ್ಸ್ ಕ್ಲಬ್ ಹಾಗೂ ಕೊಪ್ಪ ಆರೋಗ್ಯ ಕೇಂದ್ರದ ವ್ಯಾಪ್ತಿಯ ಎಲ್ಲಾ ಪ್ರಾಥಮಿಕ ಆರೋಗ್ಯ ಘಟಕಗಳ ಸಂಯುಕ್ತ ಆಶ್ರಯದಲ್ಲಿ ಉದರದರ್ಶಕ (ಲ್ಯಾಪ್ರೊಸ್ಕೊಪಿಕ್) ಸಂತಾನ ಹರಣ ಶಸ್ತ್ರ ಚಿಕಿತ್ಸಾ ಶಿಬಿರವನ್ನು ಕೊರ್ಡಹಿತ್ಲಿನ ಆಸ್ಪತ್ರೆಯಲ್ಲಿ ನವೆಂಬರ್ ೪ರ ಗುರುವಾರ ಏರ್ಪಡಿಸಲಾಗಿದೆ. ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳುವವರಿಗೆ ಉಚಿತ ವಾಹನ ಸೌಲಭ್ಯ ಏರ್ಪಡಿಸಲಾಗಿದೆ.

ಲೋಕೋಪಯೋಗಿ ಕಾಮಗಾರಿಗಳು

(೩ನೇ ಪುಟದಿಂದ)

ಗಿರಿಜನ ರಸ್ತೆಗಳು

೧. ಮೇಗುಂದ ಹೋಬಳಿಯ ಅತ್ತಿಕುಡಿಗೆಯಿಂದ ಶಾಂತಿಗ್ರಾಮ ಮಾರ್ಗವಾಗಿ ಮೆಣಸಿನ ಹಾಡ್ಯಕ್ಕೆ ಸಂಪರ್ಕ ರಸ್ತೆ: ೧೦.೩೮ ಲಕ್ಷ ರೂ. ಗಳ ಯೋಜನೆ ಮಂಜೂರಾಗಿದ್ದು ಟೆಂಡರ್ ಕರೆಯಲಾಗಿದೆ.

೨. ಕೊಪ್ಪ ತಾ|| ನ ಸಿದ್ದರ ಮಠ-ಕರಿಗೆರಸಿ ಮಧ್ಯೆ ೧.೯ ಕಿ.ಮೀ.ನ ೨ ಲಕ್ಷದ ರಸ್ತೆಗೆ ಜಲ್ಲಿ ಆಗಿದೆ. ನವೆಂಬರ್ ವೇಳೆಗೆ ಡಾಮರು ವಗೈರೆ ಮುಗಿಯಲಿದೆ.

ನೀರಾವರಿ

೧. ಬಂಡಿಗಡಿ ಬಳಿ ಎತ್ತುನೀರಾವರಿಗಾಗಿ ೩ ಲಕ್ಷ ರೂ. ರಾಜ್ಯದ ಮುಂಗಡ ಪತ್ರದಲ್ಲಿ ಮಂಜೂರಾಗಿದೆ. ಯೋಜನೆ ಸಿದ್ಧಪಡಿಸಲು ಶಿವಮೊಗ್ಗದ ಸಣ್ಣ ನೀರಾವರಿ ತನಿಖಾ ವಿಭಾಗಕ್ಕೆ ವಿನಂತಿಸಲಾಗಿದೆ.

೨. ನ.ರಾ. ಪುರ ತಾ|| ನಲ್ಲಿ ಸುಮಾರು ೧ ಸಾವಿರ ಎಕರೆಗೆ ನೀರುಣಿಸುವ ಕೆ. ಕಣಬೂರು ಎತ್ತು ನೀರಾವರಿ (ತುಂಗಾ ನದಿಗೆ) ಯೋಜನೆ ೧೨.೪ ಲಕ್ಷದಿಂದ ೨೨ ಲಕ್ಷಕ್ಕೆ ಪರಿಷ್ಕರಿಸಲಾಗಿದೆ. ಹೆಚ್ಚು ಕಡಿಮೆ ಕೆಲಸ ಮುಗಿದಿತ್ತು. ಆದರೆ ಮೊನ್ನೆಯ ನೆರೆಯಲ್ಲಿ ಪಂಪ್‌ಹೌಸ್ ಮುಳುಗಡೆಯಾಗಿ ಯಂತ್ರೋಪಕರಗಣಳು ಸುಟ್ಟು ಹೋಗಿವೆ. ರಿಪೇರಿಗಾಗಿ ಟೆಂಡರ್ ಕರೆಯಲಾಗಿದೆ.

ಖಾಸಗಿ ಬಸ್ ದರ ಇಳಿಸಲು ಸಿ.ಪಿ.ಐ ಒತ್ತಾಯ

ಚಿಕ್ಕಮಗಳೂರು: ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿ ಚಾಲ್ತಿಯಲ್ಲಿರುವ ದುಬಾರಿ ಖಾಸಗಿ ಬಸ್ ದರವನ್ನು ಇಳಿಸುವಂತೆ ಒತ್ತಾಯಿಸಿ ಜಿಲ್ಲಾಧಿಕಾರಿಗಳಿಗೂ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೂ ಪತ್ರ ಬರೆದಿರುವ ಸಿಪಿಐ ಜಿಲ್ಲಾ ಮಂಡಳಿಯು, ಈ ಬಗ್ಗೆ ಅಲ್ಲಲ್ಲಿ ನಡೆಯುತ್ತಿರುವ ಚಳುವಳಿಗಳನ್ನು ಅವರ ಗಮನಕ್ಕೆ ತಂದಿದೆ. ಈ ಬಗ್ಗೆ ಒಂದು ನ್ಯಾಯಸಮ್ಮತ ಒಪ್ಪಂದಕ್ಕೆ ಬರಲು ಉಭಯತ್ರರ ಒಂದು ಸಭೆ ಕರೆಯುವಂತೆ ಅದು ಸೂಚಿಸಿದೆ.

ಕೃಷಿ ಕೂಲಿಗಾರರ ಸಂಘದ ಹೋರಾಟ ಸಮಿತಿ

ತೀರ್ಥಹಳ್ಳಿ: ಎ.ಐ.ಟಿ.ಯು.ಸಿ.ಗೆ ಸೇರಿದ ತೀರ್ಥಹಳ್ಳಿ ತಾ|| ಕೃಷಿ ಮತ್ತು ಇತರ ಕೂಲಿಗಾರರ ಸಂಘದ ಅ.೧೮ರ ಸಭೆಯಲ್ಲಿ, ತಾ||ನಲ್ಲಿ ಚಾಲ್ತಿಯಲ್ಲಿರುವ ಕೂಲಿಯ ಒಂದು ಭಾಗವಾಗಿ ೧ ಕಿಲೋ ಅಕ್ಕಿ ಕೊಡುವ ಪದ್ಧತಿಯಲ್ಲಿ ನಡೆಯುತ್ತಿರುವ ಮೋಸ ತಪ್ಪಿಸಲು ಕೂಲಿಯನ್ನು ಪೂರ್ತಿ ನಗದು ರೂಪದಲ್ಲೇ ಕೇಳಬೇಕೆಂದು ತೀರ್ಮಾನಿಸಲಾಯಿತು.

ಸರ್ಕಾರದ ಹೇಳಿಕೆಗೆ ವಿರುದ್ಧವಾಗಿ ಕಟ್ಟೆಹಕ್ಲು ಕರ್ನಾಟಕ ಬ್ಯಾಂಕಿನವರು ಹಿಂದುಳಿದವರಿಗೆ ಸಾಲಕೊಡಲು ಜಾಮೀನು ಕೇಳುವುದರ ವಿರುದ್ಧ ಆಡಳಿತ ವರ್ಗಕ್ಕೆ ಎಚ್ಚರಿಕೆ ಕೊಡಲು ತೀರ್ಮಾನಿಸಲಾಯ್ತು.

ಹಲವು ಸಮಸ್ಯೆಗಳ ಬಗ್ಗೆ ಸರ್ಕಾರಕ್ಕೆ ಮನವಿ ಸಲ್ಲಿಸಿ, ಅಗತ್ಯ ಕಂಡಲ್ಲಿ ಹೋರಾಟ ನಡೆಸುವ ಸಲುವಾಗಿ ೧೦ ಜನರ ಹೋರಟ ಸಮಿತಿ ರಚಿಸಲಾಯ್ತು.

---

೩. ಮುತ್ತಿನ ಕೊಪ್ಪ ಬಳಿ (ತುಂಗಾ ನದಿ) ಎತ್ತು ನೀರಾವರಿಗೆ ೪೯ ಲಕ್ಷ ರೂ. ಯೋಜನೆ ಮಂಜೂರಾತಿಗೆ ಹೋಗಿದೆ. ಬಜೆಟ್ ಮಂಜೂರಾತಿ ಆಗಿದೆ. ಇದರ ಅಚ್ಚುಕಟ್ಟು ಸುಮಾರು ೧,೧೦೦ ಎಕರೆಗಳು.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ:
ಸಿರಿಮನೆ ನಾಗರಾಜ್.
ಅಚ್ಚು: ದೀವಟಿಗೆ ಅಚ್ಚುಕೂಟ, ಕೊಪ್ಪ.